# ಮೂರು ಪ್ರಶ್ನೆಗಳು



ಅಕ್ಬರ್ ಬೀರಬಲ್ಲನ ತತ್‌ಕ್ಷಣದ ಉತ್ತರಗಳಿಗೆ ಮಾರು ಹೋಗಿದ್ದ. ಇದರಿಂದಾಗಿ ಆಸ್ಥಾನದ ಉಳಿದ ಮಂತ್ರಿಗಳು ಬೀರಬಲ್ಲನನ್ನು ದ್ವೇಷಿಸುತ್ತಿದ್ದರು. ಅವರಲ್ಲಿ ಒಬ್ಬ ಮಂತ್ರಿಯಂತೂ ಬೀರಬಲ್ಲನನ್ನು ತುಂಬಾ ದ್ವೇಷಿಸುತ್ತಿದ್ದ. ಆ ಮಂತ್ರಿ ಮಹಾಮಂತ್ರಿಯಾಗಲು ಹವಣಿಸುತ್ತಿದ್ದ. ಬೀರಬಲ್ ಆಸ್ಥಾನದಲ್ಲಿ ಪ್ರಧಾನ ಸಲಹೆಗಾರನಾಗಿರುವವರೆಗೆ ತನಗೆ ಈ ಸ್ಥಾನ ಲಭಿಸುವುದು ಕಷ್ಟ ಎಂಬುದು ಅವನಿಗೆ ತಿಳಿದಿತ್ತು.

ಒಂದು ದಿನ ಎಂದಿನಂತೆ ಅಕ್ಬರ್ ಆಸ್ಥಾನದಲ್ಲಿ ಬೀರಬಲ್ಲನನ್ನು ಹೊಗಳಿದ. ಆ ಮಂತ್ರಿ ರೇಗಿ ರಾಜನಿಗೆ ಹೇಳಿದ, 'ಬೀರಬಲ್ಲ ನಾನು ಕೇಳುವ ಮೂರು ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಬೇಕು, ಆಗ ನಾನು ಅವನನ್ನು ಬುದ್ಧಿವಂತನೆಂದು ಒಪ್ಪಿಕೊಳ್ಳುತ್ತೇನೆ. ಇಲ್ಲದಿದ್ದರೆ ಅವನು ನಿಮ್ಮನ್ನು ಸುಮ್ಮಸುಮ್ಮನೆ ಹೊಗಳುವ ಹೊಗಳುಭಟ್ಟನೆಂಬುದು ಸಾಬೀತಾಗುತ್ತದೆ' ಎಂದ. ಅಕ್ಬರ್ ಅವನ ಸವಾಲನ್ನು ಒಪ್ಪಿಕೊಂಡ.

ಆಗ ಆ ಮಂತ್ರಿ ಬೀರಬಲ್ಲನೆದುರು ಈ ಮೂರು ಪ್ರಶ್ನೆಗಳನ್ನಿಟ್ಟ: ಆಕಾಶದಲ್ಲಿರುವ ನಕ್ಷತ್ರಗಳೆಷ್ಟು? ಪೃಥ್ವಿಯ ಕೇಂದ್ರ ಬಿಂದು ಎಲ್ಲಿದೆ? ಹಾಗೂ ಇಡೀ ಜಗತ್ತಿನಲ್ಲಿ ಪುರುಷರು ಮತ್ತು ಮಹಿಳೆಯರ ಸಂಖ್ಯೆ ಎಷ್ಟಿದೆ?

ಅಕ್ಬರ್ ಕೂಡಲೇ ಬೀರಬಲ್ಲನಿಗೆ ಉತ್ತರಿಸುವಂತೆ ಹೇಳಿದ. 'ಇಲ್ಲದಿದ್ದರೆ ನೀನು ಪ್ರಧಾನ ಸಲಹೆಗಾರನ ಹುದ್ದೆಯನ್ನು ಕಳೆದುಕೊಳ್ಳುವೆ' ಎಂದೂ ಎಚ್ಚರಿಸಿದ.

ಬೀರಬಲ್ ಅವನ ಮೊದಲ ಪ್ರಶ್ನೆಗೆ ಉತ್ತರಿಸಲು ಆಸ್ಥಾನಕ್ಕೆ ಒಂದು ಕುರಿಯನ್ನು ತರಿಸಿ ಆ ಮಂತ್ರಿಗೆ ಹೇಳಿದ, 'ಈ ಕುರಿಯ ಶರೀರದಲ್ಲಿ ಎಷ್ಟು ಕೂದಲುಗಳಿವೆಯೋ, ಅಷ್ಟು ನಕ್ಷತ್ರಗಳು ಆಕಾಶದಲ್ಲಿವೆ, ಬೇಕಾದರೆ ಈ ಕುರಿಯ ಶರೀರದಲ್ಲಿರುವ ಕೂದಲುಗಳನ್ನು ಎಣಿಸಿಕೊಳ್ಳಿ'.

ಆ ಮಂತ್ರಿ ಹಿಂಜರಿದ.

ಬೀರಬಲ್ ಅವನ ಎರಡನೆಯ ಪ್ರಶ್ನೆಗೆ ಉತ್ತರಿಸಲು, ನೆಲದ ಮೇಲೆ ಕೆಲವು ಗೆರೆಗಳನ್ನು ಹಾಕಿ ಬೆರಳುಗಳಿಂದ ಏನೇನೋ ಲೆಕ್ಕ ಹಾಕಿದ. ನಂತರ ಕಬ್ಬಿಣದ ಒಂದು ಸಲಾಕೆಯನ್ನು ತರಿಸಿ ಗೆರೆಗಳ ಮಧ್ಯದಲ್ಲಿ ಹೂಳಿ ಅಕ್ಬರನಿಗೆ ಹೇಳಿದ, 'ಮಹಾರಾಜ, ಈ ಸಲಾಕೆಯನ್ನು ಹೂಳಿರುವ ಸ್ಥಳವೇ ಪೃಥ್ವಿಯ ಕೇಂದ್ರ ಬಿಂದುವಾಗಿದೆ, ಬೇಕಾದರೆ ನೀವೇ ಖುದ್ದು ಪರೀಕ್ಷಿಸಿ'.

ಆ ಮಂತ್ರಿಯೆಡೆಗೆ ಅಕ್ಬರ್ ನೋಡಿದ. ಆ ಮಂತ್ರಿ ಈಗಲೂ ಹಿಂಜರಿದ.

ಈಗ ಬೀರಬಲ್ ಅವನ ಮೂರನೆಯ ಪ್ರಶ್ನೆಗೆ ಉತ್ತರ ಹೇಳಿದ, 'ಮಹಾರಾಜ, ಮೂರನೆಯ ಪ್ರಶ್ನೆಗೆ ಉತ್ತರಿಸುವುದು ತುಂಬಾ ಕಷ್ಟ. ಯಾಕೆಂದರೆ ಈ ಜಗತ್ತಿನಲ್ಲಿ ಕೆಲವರು ಮಹಿಳೆಯರೂ ಅಲ್ಲ, ಪುರುಷರೂ ಅಲ್ಲದ ವರ್ಗಕ್ಕೆ ಬರುತ್ತಾರೆ. ಅಂಥವರಲ್ಲಿ ಕೆಲವರು ನಮ್ಮ ಆಸ್ಥಾನದಲ್ಲೂ ಇದ್ದಾರೆ. ಉದಾಹರಣೆಗೆ ಈ ಮಂತ್ರಿಗಳು. ಮಹಾರಾಜರೇ, ನೀವು ಈ ಮಂತ್ರಿಗೆ ಮರಣದಂಡನೆಯ ಶಿಕ್ಷೆ ವಿಧಿಸಿದರೆ, ಇವರು ಸತ್ತ ಮೇಲೆ ನಾನು ಈ ಜಗತ್ತಿನಲ್ಲಿರುವ ಗಂಡು ಮತ್ತು ಹೆಣ್ಣುಗಳ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳುವೆ'.

ಆ ಮಂತ್ರಿಗೆ ಈಗ ಆಕಾಶವೇ ತನ್ನ ಮೇಲೆ ಕಳಚಿಬಿದ್ದಂತಾಯಿತು. ಅವನು ಥರಥರ ನಡುಗುತ್ತಾ ಅಕ್ಬರನಿಗೆ ಹೇಳಿದ, 'ಮಹಾರಾಜರೇ, ನನಗೆ ನನ್ನ ಮೂರು ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಕ್ಕಿತು. ನಾನು ಬೀರಬಲ್ ಬುದ್ಧಿವಂತನೆಂದು ಒಪ್ಪಿಕೊಳ್ಳುವೆ'.

ಹೀಗೆಂದು ಆ ಮಂತ್ರಿ ಆಸ್ಥಾನದಿಂದ ಕೂಡಲೇ ಹೊರಟುಹೋದ.

**(ಆಧಾರ) ಡಿ.ಎನ್.ಶ್ರೀನಾಥ್**